ಇ) ಈ ಚಹಾ ಯೋಜನೆಯು ರಾಷ್ಟ್ರೀಯ ಗ್ರಾಮೀಣ ಕೃಷಿ ಅಭಿವೃದ್ಧಿ ಬ್ಯಾಂಕಿನಿಂದ ಅಂಗೀಕರಿಸಲ್ಪಟ್ಟಿದ್ದು ೫ ವರ್ಷಗಳ ಅವಧಿಯಲ್ಲಿ ಸುಮಾರು ೭೫೫.೭೮ ಲಕ್ಷ ರೂ.ಗಳ ವೆಚ್ಚದಲ್ಲಿ ಕಾರ್ಯರೂಪಕ್ಕೆ ತರುವ ಮಾದರಿಯಲ್ಲಿದೆ. ಸದ್ಯಕ್ಕೆ ಈ ಯೋಜನೆಯು ಮೊದಲನೆಯ ಹಂತದಲ್ಲಿ ೮೦೦ ಹೆಕ್ಟೇರು ಜಮೀನಿನಲ್ಲಿ ತೋಟ ಬೆಳೆಸುವ ಕಾರ್ಯಕ್ರಮವಿದೆ.

ಸಂಡೂರು ತಾಲ್ಲೂಕಿನ ಗಣಿ ಪ್ರದೇಶಗಳಲ್ಲಿ ಅರಣ್ಯ ನಾಶ ಕುರಿತು

೪೧೨. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಡೂರು ತಾಲ್ಲೂಕಿನ ಕಬ್ಬಿಣದ ಅದಿರಿನ ಬೆಟ್ಟಗಳು ದಟ್ಟ ಅರಣ್ಯ ಸಂಪತ್ತಿನಿಂದ ಕೂಡಿದ್ದು ಗಣಿ ಚಟುವಟಿಕೆಗಳಿಂದಾಗಿ ಭಾರಿ ಪ್ರಮಾಣದ ಅರಣ್ಯ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗಣಿಯಿಂದ ಅದಿರು ತೆಗೆಯುವ ಕೆಲಸ ಮುಗಿದಾಕ್ಷಣ ಸಸಿ ನೆಡುವ ಕೆಲಸ ಕಡ್ಡಾಯವಾಗಿ ಮಾಡಬೇಕೆಂದು ನಿಯಮವಿದ್ದರೂ ಗಣಿ ಮಾಲೀಕರು ನಿಯಮ ಪಾಲಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ೧೯೮೦ರಿಂದ ಈಚೆಗೆ ಸಂಡೂರು ತಾಲ್ಲೂಕಿನ ಅರಣ್ಯ ನಾಶದ ಪ್ರಮಾಣವೆಷ್ಟು?

ಈ) ಅರಣ್ಯ ನಾಶಪಡಿಸಿ ಗಿಡಗಳನ್ನು ಬೆಳೆಸದಿರುವ ಗಣಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಜಿ.ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹಿಂದೆ ಸಂಡೂರು ತಾಲ್ಲೂಕಿನ ಕೆಲವು ಅರಣ್ಯ ಪ್ರದೇಶಗಳ ಹಲವು ಭಾಗಗಳು ಮಾತ್ರ ದಟ್ಟ ಅರಣ್ಯ ಸಂಪತ್ತಿನಿಂದ ಕೂಡಿದ್ದು ಸದರಿ ಹಲವು ಪ್ರದೇಶಗಳಲ್ಲಿನ ಅದಿರನ್ನು ತೆಗೆಯಬೇಕಾದರೆ ಸ್ವಲ್ಪ ಪ್ರಮಾಣದ ಅರಣ್ಯ ನಾಶವಾಗುವುದು ಸಹಜ. ಹಾಗೂ ಅದಿರಿನ ಪ್ರಮಾಣ ಹೆಚ್ಚು ಇರುವ ಜಾಗಗಳಲ್ಲಿ ಅರಣ್ಯ ಗಿಡಮರಗಳ ಬೆಳವಣಿಗೆಯು ಕಡಿಮೆ ಇರುವುದು ಸಾಮಾನ್ಯ.

ಆ) ಇಲ್ಲ.

ಇ) ೧೯೮೦ ರಿಂದ ಈಚೆಗೆ ಸಂಡೂರು ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಅರಣ್ಯ ನಾಶವಾಗಿಲ್ಲ.

ಈ) ಉದ್ಭವಿಸುವುದಿಲ್ಲ.

ವರಾಹಿ ಯೋಜನೆ ಗುಬ್ಬಿಗ ರೇಂಜ್‌ನ ಮರಗಳ ಬಗ್ಗೆ

೬೩೧. ಶ್ರೀ ಬಿ. ಎ. ಉಮಾರಬ್ಬ (ವಿಟ್ಲ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರಾಹಿ ಯೋಜನೆ ಅರಣ್ಯ ವೃತ್ತದಲ್ಲಿಯ ಗುಬ್ಬಿಗ ರೇಂಜ್ ೯೭ನೇ ಕೂಪಿನಿಂದ ಪ್ರಾರಂಭವಾದ ದಿನಾಂಕದಿಂದ ಈವರೆಗೆ ಬಿಡುಗಡೆಯಾದ ಅರಣ್ಯ ಉತ್ಪನ್ನಗಳಾದ ಕಟ್ಟಿಗೆ ಮತ್ತು ಮರದ ಪ್ರಮಾಣವೆಷ್ಟು?

ಆ) ಇಲ್ಲಿಂದ ಮೈಸೂರು ಪೇಪರ್ ಮಿಲ್ಸ್ ಲಿ. ಭದ್ರಾವತಿಗೆ ಸರಬರಾಜಾದ ಅರಣ್ಯ ಉತ್ಪನ್ನಗಳ ವಿವರಗಳೇನು?

ಇ) ಅರಣ್ಯ ಉತ್ಪನ್ನಗಳು ಅಕ್ರಮ ವಿಲೇವಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?